ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

OS ನಂಬರ. 23/2023

ಪಿ ಡಬ್ಲ್ಯೂ - 3

ದಿಃ 23-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಸವಿತಾ ಆಗೇರ |
| ಗಂಡನ ಹೆಸರುಃ | ನಾಗರಾಜ |
| ವಯಸ್ಸುಃ | 45 ವರ್ಷ |
| ಉದ್ಯೋಗಃ | ಪಂಚಾಯತಿಯ ಅಧ್ಯಕ್ಷರು |
| ವಿಳಾಸಃ | ಅವರ್ಸಾ |

ಮುಖ್ಯ ವಿಚಾರಣೆ: ವಾದಿ ಪರ ವಕೀಲರಾದ ಶ್ರೀ ವಿ.ಎಸ್.ಎನ್ ಇವರಿಂದಃ

ವಾದಿಯು ಲಕ್ಷ್ಮಿನಾರಾಯಣವಾಡಾದಲ್ಲಿ ಸುಮಾರು 20 ವರ್ಷಗಳಿಂದ ವಾಸ ಮಾಡುತ್ತಿದ್ದಾರೆ. ಅದನ್ನು ನಾವು ನೋಡಿಕೊಂಡು ಬಂದಿರುತ್ತೇವೆ. ವಾದಿಯು ಮನೆಗೆ ಸಂಬಂಧಪಟ್ಟಂತೆ ಪ್ರತಿವರ್ಷವು ತೆರಿಗೆಯನ್ನು ಪಾವತಿ ಮಾಡುತ್ತಾ ಬಂದಿದ್ದು, ಅದಕ್ಕೆ ಸಂಬಂಧಪಟ್ಟಂತೆ ನಿಪಿ-2 ಅವರ್ಸಾ ಗ್ರಾಮ ಪಂಚಾಯತಿಯಿಂದ ನೀಡಿದ ಪ್ರಮಾಣಪತ್ರವಾಗಿರುತ್ತದೆ. ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು, ಸಹಿಯನ್ನು ನಿಪಿ-2ಬಿ ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯರ ಪರ ವಕೀಲರಾದ ಶ್ರೀ ಎಂ.ಪಿ.ಬಿ ಇವರಿಂದಃ

2. ಅವರ್ಸಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಯಾರು ಯಾರು ಬಾಡಿಗೆ ಆಧಾರದ ಮೇಲೆ ಹಾಗೂ ಮಾಲೀಕತ್ವದ ಆಧಾರದ ಮೇರಗೆ ಅಥವಾ ಪರವರನಿಗೆ ಮೇರೆಗೆ ಇರುತ್ತಾರೆ ಎಂಬುದರ ಬಗ್ಗೆ ದಾಖಲಾತಿಗಳು ನಿಮ್ಮ ಹತ್ತಿರ ಇದೆಯಾ ಅಥವಾ ಇಲ್ಲವಾ ಎಂದರೆ ನನ್ನ ಹತ್ತಿರ ಇರುವುದಿಲ್ಲ, ಪಂಚಾಯತಿಯಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ-2 ರಲ್ಲಿ ಪಂಚಾಯತ್ ಅಧ್ಯಕ್ಷನಾತೆಯಿಂದ ಸಹಿ ಮಾಡಿರುತ್ತೀರೋ ಅಥವಾ ಹೀಗೆ ಮಾಡಿರುತ್ತಿರೋ ಎಂದರೆ ಅಧ್ಯಕ್ಷನಾತೆಯಿಂದ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಅಧ್ಯಕ್ಷನಾತೆಯಿಂದ ಸಹಿ ಮಾಡಬೇಕಾದರೆ ಸೀಲ್ ಇರುತ್ತದೆ ಎಂದರೆ ಸರಿ. ಪಂಚಾಯತಿಯಿಂದ ಯಾವುದೇ ಕಾಗದ ಪತ್ರಗಳನ್ನು ಪೂರೈಸಬೇಕಾದರೆ ಪಿಡಿಓ ಇರುತ್ತಾರೆ ಎಂದರೆ ಸರಿ. ನಿಪಿ-2 ಕ್ಕೆ ಪಿಡಿಓ ಏನಾದರೂ ಸಹಿ ಮಾಡಿರುತ್ತಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಕಚೇರಿಯಿಂದ ಪ್ರಮಾಣ ಪತ್ರವನ್ನು ಕೊಡಬೇಕಾದರೆ ಪಿಡಿಓ ಇವರ ಸೀಲ್ ಮತ್ತು ಸಹಿಯನ್ನು ಹಾಕಿದರೆ ಮಾತ್ರ ಸಿಂಧು ಆಗುತ್ತದೆ ಎಂದರೆ ಸರಿ. ನಿಪಿ-2 ರಲ್ಲಿ ನಿಮ್ಮ ಸೀಲ್ ಆಗಲಿ ಅಥವಾ ಪಿಡಿಓ ಇವರ ಸೀಲಾಗಲಿ ಇರುವುದಿಲ್ಲ ಎಂದರೆ ಸರಿ. 2ನೇ ಪ್ರತಿವಾದಿ ಯಾರು ಎಂದು ನನಗೆ ಗೊತ್ತಿರುವುದಿಲ್ಲ. ನೀವು ಅಧಿಕಾರನಾತೆಯಿಂದ ಯಾವುದೇ ಸಹಿಯನ್ನು ಮಾಡಿರುವುದಿಲ್ಲ, ಬದಲಾಗಿ ವಾದಿಯ ಒತ್ತಾಯದ ಮೇರೆಗೆ ಒಂದು ಸಹಿಯನ್ನು ಹಾಕಿ ಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ಅವರ್ಸಾ ಗ್ರಾಮ ಪಂಚಾಯತಿಯಲ್ಲಿ ಒಟ್ಟು ಎಷ್ಟು ಮನೆಗಳು ಇರುತ್ತವೆ ಎಂದರೆ ಸಾಕ್ಷಿಯು 4500-5000 ಸಾವಿರ ಮನೆಗಳು

ಇರುತ್ತವೆ ಎಂದು ನುಡಿಯುತ್ತಾರೆ. ಇಷ್ಟೇ ಮನೆಗಳು ಇರುತ್ತವೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ ಎಂದರೆ ಸರಿ. ಮನೆಯಲ್ಲಿ ವಾಸ ಮಾಡುವ ವ್ಯಕ್ತಿಗಳು ಮಾಲೀಕ ನಾತೆಯಿಂದ ವಾಸ ಮಾಡುತ್ತಾರಾ ಅಥವಾ ಬಾಡಿಗೆ ಆಧಾರದ ಮೇರೆಗೆ ಅಥವಾ ಲೈಸೆನ್ಸಿ ನಾತೆಯಿಂದ ವಾಸ ಮಾಡುತ್ತಿದ್ದಾರೆ ಎಂದು ಹೇಳಲು ಬರುವುದಿಲ್ಲ. ನಿಮ್ಮ ಪ್ರಕಾರ ತೆರಿಗೆ ಪಾವತಿಸುವವರು ಎಲ್ಲರೂ ಮಾಲೀಕರು ಎಂದು ಹೇಳುತ್ತೀರಾ ಎಂದರೆ ಸಾಕ್ಷಿಯು ಅವರು ಮನೆಗಳನ್ನು ಕಟ್ಟಿಕೊಂಡಿರುವ ಕಾರಣ ತೆರಿಗೆಯನ್ನು ಕೊಡುತ್ತಾರೆ ಇಲ್ಲವಾದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ತೆರಿಗೆ ರಜಿಸ್ಟರಿನ ಪ್ರಕಾರ ಸದರಿ ಮನೆಗೆ ವಾದಿಯ ಹೆಸರು ಇದೆಯಾ ಎಂದರೆ ಸಾಕ್ಷಿಯು ಆಕೆಯ ಮಾವನ ಹೆಸರಿನಲ್ಲಿ ಇರುತ್ತವೆ ಎಂದು ನುಡಿಯುತ್ತಾರೆ. ಎಷ್ಟು ವರ್ಷಗಳಿಂದ ಅವರ ಮಾವನ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಮನೆಯನ್ನು ಕಟ್ಟಿ 20 ವರ್ಷಗಳು ಆಗಿದ್ದರಿಂದ ಸುಮಾರು 20 ವರ್ಷಗಳಿಂದ ಇರಬಹುದು ಎಂದು ನುಡಿಯುತ್ತಾರೆ.

<u>ಮರುವಿಚಾರಣೆಃ</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.